## ವಿಮರ್ಶಕ ಜಿ.ಎಸ್. ಆಮೂರ

# ಒಬ್ಬರು ಹೇಳಿದ್ದನ್ನೇ ಎಲ್ಲರೂ ಪಠಿಸಿದರೆ ಲಿಟರರಿ ಸ್ಕಾಲರ್‌ಷಿಪ್ ಹುಟ್ಟಿಕೊಳ್ಳುವುದಿಲ್ಲ...

ಕನ್ನಡ ಸಾಹಿತ್ಯ ವಿಮರ್ಶೆಗೆ ಆಳ, ಅಷ್ಟೇ ವಿಸ್ತಾರವಾದ ಹರಹನ್ನು ಕೊಟ್ಟವರು ಜಿ.ಎಸ್. ಆಮೂರರು. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬರೆಯುತ್ತ ಬಂದಿರುವ ಅವರ ವಿಮರ್ಶನ ವ್ಯವಸಾಯಕ್ಕೆ 60ಕ್ಕೂ ಹೆಚ್ಚು ವರ್ಷಗಳು. ಅವರ ಪುಸ್ತಗಳ ಸಂಖ್ಯೆ 70ನ್ನು ದಾಟುತ್ತದೆ. ಇಷ್ಟು ದೀರ್ಘಕಾಲದಿಂದ ವಿಮರ್ಶೆಯನ್ನು ಬರೆದುಕೊಂಡು ಬಂದಿರುವ ಮತ್ತೊಬ್ಬ ವಿಮರ್ಶಕ ಕನ್ನಡದಲ್ಲಿ ವಿರಳ. ಅನುವಾದಗಳನ್ನೂ ಮಾಡಿರುವ ಆಮೂರರು ದೊಡ್ಡ ಸಂಖ್ಯೆಯ ಬರಹಗಳನ್ನು ಸಂಪಾದಿಸಿದ್ದಾರೆ. ಇಂತಹ ಅಪರೂಪದಲ್ಲಿ ಅಪರೂಪರಾದ ಆಮೂರರೊಂದಿಗೆ ಕನ್ನಡದ ಕಥೆಗಾರ **ಎಸ್. ದಿವಾಕರ್** 'ಮಯೂರ'ಕ್ಕಾಗಿ ನಡೆಸಿದ ಸಂದರ್ಶನ ಇಲ್ಲಿದೆ.



ಚಿತ್ರಗಳು: ಚಂದ್ರಹಾಸ ಕೋಟೆಕಾರ್